# ನೆರೆಯವನನ್ನು ಪ್ರೀತಿಸು

ಈಗ ನಡೆಯುತ್ತಿರುವ ಬಹುಪಾಲು ಸಾರ್ವಜನಿಕ ಚರ್ಚೆ, ಸಂವಾದಗಳಲ್ಲಿ ಜನಸಾಮಾನ್ಯರು ಅನುಭವಿಸುತ್ತಿರುವ ಬದುಕಿನ ಬವಣೆಗಳೇ ಇರುವುದಿಲ್ಲ! ಬದಲಿಗೆ ಹಸಿದವರಿಗೆ ಒಂದು ತುತ್ತು ಅನ್ನನೀಡದ, ತುಂಡು ಬಟ್ಟೆ ಕೊಡದ, ನಿರ್ಗತಿಕರಿಗೆ ಒಂದು ಸೂರು ಕಲ್ಪಿಸಿಕೊಡದ, ಉದ್ಯೋಗ ನೀಡದ ಅಮೂರ್ತ ವಿಚಾರಗಳ ಸುತ್ತಲೇ ಗಿರಕಿ ಹೊಡೆಯುತ್ತಿರುವುದು ದುರದೃಷ್ಟಕರ ಸಂಗತಿ. ಉಸಿರಾಡುವ ಜನತೆಯ ಬೇಕು–ಬೇಡಗಳನ್ನು ಕುರಿತು ನಮ್ಮನ್ನು ಆಳುವವರ ಸಂವೇದನೆಗಳು ಇಷ್ಟು ಮೊಂಡಾಗಿರುವುದು ಸಮಾಜಕ್ಕೆ ಒಳ್ಳೆಯ ಸಂದೇಶವಂತೂ ಅಲ್ಲ! ಹಸಿವು, ಬಡತನ, ಆರೋಗ್ಯ ಹಾಗೂ ನಿರುದ್ಯೋಗದ ಸಮಸ್ಯೆಗಳನ್ನು ಮುಖ್ಯ ಸಮಸ್ಯೆಯನ್ನಾಗಿ ಪರಿಗಣಿಸದೆ, ಅವುಗಳನ್ನೆಲ್ಲಾ ಚರ್ಚೆ ಮತ್ತು ಅನುಷ್ಠಾನದ ಪರಿಧಿಯಿಂದ ಹೊರಗಿಟ್ಟಿರುವ ಅಪರಾಧದಲ್ಲಿ ನಾವೂ ಕೂಡ ಭಾಗಿಗಳು.

ಸಂವಿಧಾನವು ನಮಗೆ ನೀಡಿದ ಸ್ವಾತಂತ್ರ್ಯ, ಸಮಾನತೆ, ಶಿಕ್ಷಣ ಹಾಗೂ ಸಹಬಾಳ್ವೆಯ ಹಕ್ಕುಗಳನ್ನು ಯಾವ ಧರ್ಮಗಳೂ ನಮಗೆ ನೀಡಿಲ್ಲ ಎನ್ನುವುದು ಹಗಲಿನಷ್ಟೇ ಸತ್ಯ! 'ಸರ್ವೇ ಜನಾಃ ಸುಖಿನೋ ಭವಂತು' 'ವಸುದೈವ ಕುಟುಂಬಕಂ' ಧರ್ಮಗ್ರಂಥಗಳಲ್ಲಿ ಹೇಳಲಾಗಿರುವ ಈ ಪದಗುಚ್ಛಗಳೆಲ್ಲವೂ ಕೇವಲ ಪಂಡಿತರ, ವಾಗ್ಮಿಗಳ ಉಲ್ಲೇಖಕ್ಕೆ ಮೀಸಲಾಗಿವೆಯೇ ಹೊರತು, ಅವು ಎಂದಿಗೂ ಸಮಾಜದ ನಡುವೆ ಅನುಷ್ಠಾನಗೊಂಡಿಲ್ಲ ಎನ್ನುವುದು ಪಂಡಿತರು ಹಾಗೂ ಧರ್ಮಬೀರುಗಳಿಗೂ ಗೊತ್ತಿರುವ ಸಂಗತಿ. ಹೆಜ್ಜೆಗುರುತುಗಳನ್ನು ಉಳಿಸದ ನಡೆ, ಲೋಪಗಳನ್ನು ತೊಳೆದುಕೊಳ್ಳದ ನುಡಿ ಇವೆಲ್ಲವೂ ದೀಪವಿಲ್ಲದ ಇರುಳಿನಂತೆ. ಎಲ್ಲ ಧರ್ಮಗಳ ನಿಯಮಗಳಿಗಿಂತಲೂ ಮಿಗಿಲಾದ ಹೊಸ ರೂಪದ ಸಮಾಜವನ್ನು ಕಟ್ಟಬೇಕಾದರೆ, ಸಂವಿಧಾನ ಹೇಳುವ ಉತ್ಕೃಷ್ಟ ಮೌಲ್ಯಗಳೊಂದಿಗೆ 'ಮನುಷ್ಯಜಾತಿ ತಾನೊಂದೆ ವಲಂ' ಹಾಗೂ ಲೋಕಕಾರುಣ್ಯದ ಉದಾರವಾದಿ ಚಿಂತನೆಗಳು ಜೊತೆಗೂಡಿ ಕಾರ್ಯನಿರ್ವಹಿಸಬೇಕಾಗಿದೆ. ಜನಸಾಮಾನ್ಯರ ಬದುಕನ್ನು ಗೌರವಯುತಗೊಳಿಸಿ ಹಸನುಗೊಳಿಸುವ ದೃಢವಾದ ನಿರ್ಣಯಕ್ಕೆ ಯಾವ ಧರ್ಮದ ನಿಯಮವೂ ಅಡ್ಡಿ ಬರಬಾರದು. ಇದರಿಂದಾಗಿ ಬಡವರ ಬದುಕಿನಲ್ಲಿ ಬರುವ ಸಂತಸದ ಬೆಳಕಿನ ಮುಂದೆ ದೀಪದ ಬೆಳಕೂ ಮಂಕಾಗುತ್ತದೆ. ಆದ್ದರಿಂದಲೇ 'ಬೇರೆಯವರು ನಿನಗೆ ಏನು ಮಾಡಬೇಕೆಂದು ಬಯಸುತ್ತೀಯೋ ಅದನ್ನೇ ಅವರಿಗೂ ನೀನು ಮಾಡು' ಎಂದು ಸಂತನ ನುಡಿಯೊಂದು ಹೇಳುತ್ತದೆ.

ಒಮ್ಮೆ ಬುದ್ಧ ಭಿಕ್ಷುಗಳ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದ. ಮಾರ್ಗದಲ್ಲಿ ಸಿಕ್ಕ ಹಳ್ಳಿಯೊಂದರಲ್ಲಿ ವಿಶ್ರಾಂತಿಗಾಗಿ ಭಿಕ್ಷುಗಳೊಡನೆ ತಂಗಿದ್ದ. ಬುದ್ಧನ ಬಗ್ಗೆ ಕೇಳಿ ತಿಳಿದಿದ್ದ ಆ ಹಳ್ಳಿಯವರಿಗೆ ಬುದ್ಧನನ್ನು ಕಂಡು ಸಂತೋಷವಾಯಿತು. ಬುದ್ಧನನ್ನು ಮತ್ತು ಅವನ ಪರಿವಾರವನ್ನು ಹಳ್ಳಿಯ ಜನ ಊಟಕ್ಕೆ ಆಹ್ವಾನಿಸಿದರು. ಜೊತೆಗೆ ಧರ್ಮ ಪ್ರವಚನ ನೀಡುವಂತೆ ಕೇಳಿಕೊಂಡರು. ಹಳ್ಳಿಯವರ ಆಹ್ವಾನವನ್ನು ಬುದ್ಧ ಒಪ್ಪಿಕೊಂಡ. ಆ ಊರಿನ ದನಗಾಹಿಗೂ ಈ ವಿಷಯ ತಿಳಿಯಿತು. ಬುದ್ಧನ ಬಗ್ಗೆ ಸಾಕಷ್ಟು ಕೇಳಿದ್ದ ಅವನಿಗೆ ಬುದ್ಧನನ್ನು ನೋಡಬೇಕು, ಅವರ ಪ್ರವಚನವನ್ನು ಕೇಳಬೇಕು, ಕೇಳಿ ಧನ್ಯನಾಗಬೇಕು ಎನ್ನುವ ಆಸೆ ದನಗಾಹಿಯಲ್ಲಿ ಮೂಡಿತು. ಆದರೆ ಅವನು ಪ್ರತಿದಿನದ ತನ್ನ ಕಾಯಕದಂತೆ ದನಗಳನ್ನು ಮೇಯಿಸಲು ಬೆಳಗಿನ ಹೊತ್ತು ಕಾಡಿಗೆ ಹೋಗಲೇ ಬೇಕಿತ್ತು!

ಬುದ್ಧನ ಪ್ರವಚನವನ್ನು ಕೇಳುವ ತವಕ ಅವನಲ್ಲಿತ್ತು. ಆದರೂ ದನಗಾಹಿ ಊರಿನ ದನಗಳನ್ನು ಕಾಡಿಗೆ ಅಟ್ಟಿಕೊಂಡು ಹೋದ. ದನಗಳು ಮೇಯ್ದು ಮೇಲೆ ಮಧ್ಯಾಹ್ನ ಅಲ್ಲಿಯ ವಿಶಾಲ ಮರವೊಂದರ ನೆರಳಿನಲ್ಲಿ ಅವುಗಳನ್ನು ಮಂದೆ ಹಾಕಿದ. ಈ ವೇಳೆಗಾಗಲೇ ಬುದ್ಧಭಗವಾನರ ಪ್ರವಚನ ಮುಗಿದಿರಬಹುದೆಂಬ ಶಂಕೆಯಿಂದಲೇ, ಕಾಡಿನಿಂದ ಬುದ್ಧಭಗವಾನರು ಪ್ರವಚನ ನೀಡುತ್ತಿದ್ದ ಸ್ಥಳಕ್ಕೆ ಓಡೋಡಿ ಬಂದ.

ಆ ವೇಳೆಗಾಗಲೇ ಭಿಕ್ಷುಗಳೊಂದಿಗೆ ಬುದ್ಧ ಊಟ ಮುಗಿಸಿ, ಮರದ ನೆರಳಿನಲ್ಲಿ ಕುಳಿತಿದ್ದ. ಅವನ ಮುಂದೆ ಸುತ್ತಲ ಹಳ್ಳಿಗಳ ಜನ ಬಂದು ಕುಳಿತಿದ್ದರು. ಬುದ್ಧ ಪ್ರವಚನ ಪ್ರಾರಂಭಿಸಬೇಕಿತ್ತು. ಅಷ್ಟರಲ್ಲಿ ಆ ದನಗಾಹಿ ಉಸಿರುಹಿಡಿದುಕೊಂಡು ಓಡೋಡಿ ಬಂದು ಬುದ್ಧನ ಮುಂದೆ ಕುಳಿತ. ಓಡಿಬಂದು ಕುಳಿತ ದನಗಾಹಿಯನ್ನು ನೋಡಿ ಬುದ್ಧ ಕೇಳಿದ, 'ಬಂಧು, ಏಕೆ ಹೀಗೆ ಓಡೋಡಿ ಬಂದೆ?' 'ಭಗವಾನರನ್ನು ನೋಡಲು ಮತ್ತು ತಮ್ಮ ಪ್ರವಚನವನ್ನು ಕೇಳಲು ಬಂದೆ' ದನಗಾಹಿ ಉಸಿರು ತಿರುಗಿಸಿಕೊಳ್ಳದೆ ಉತ್ತರಿಸಿದ. 'ಬಂಧು ನೀನು ಊಟ ಮಾಡಿದ್ದೀಯಾ?' ದನಗಾಹಿಯನ್ನು ಬುದ್ಧ ಕೇಳಿದ. 'ಇಲ್ಲ ಭಗವಾನ್', 'ಹಾಗಾದರೆ ಊಟ ಮಾಡದೆ ಪ್ರವಚನವನ್ನು ಕೇಳಲು ಏಕೆ ಬಂದೆ?', 'ಭಗವಾನರ ದರ್ಶನ ನನಗೆ ಊಟಕ್ಕಿಂತಲೂ ಮುಖ್ಯ ಎನಿಸಿತು. ಅದಕ್ಕೆ ಓಡೋಡಿ ಬಂದೆ.' ಬುದ್ಧಭಗವಾನರು ಅಲ್ಲಿದ್ದ ಹಳ್ಳಿಗರಿಗೆ 'ಹಸಿದು ಬಂದಿರುವ ಈ ಬಂಧುವಿಗೆ ಮೊದಲು ಊಟ ಮಾಡಿಸಿ' ಎಂದರು. ಹಳ್ಳಿಗರು ದನಗಾಹಿಗೆ ಊಟ ಮಾಡಿಸಿ, ಮತ್ತೆ ಬುದ್ಧದೇವನ ಮುಂದೆ ಕೂರಿಸಿದರು. ಅಲ್ಲಿ ನೆರೆದಿದ್ದವರಿಗೆ ಬುದ್ಧಭಗವಾನರು ಹೇಳಿದರು, 'ಹಸಿದ ಹೊಟ್ಟೆಗೆ ಧರ್ಮವನ್ನು ತುಂಬಲಾಗುವುದಿಲ್ಲ'.

ಇಂತಹ ಅರಿವಿನ ಹಿನ್ನೆಲೆಯಲ್ಲಿಯೇ ಪ್ರಭುದೇವರು 'ಗಗನದಿಂದ ಮೇಲೆ ಅನುಭಾವ ತಾನಿಲ್ಲ!' ಎಂದರು. ಈ ದೃಷ್ಟಾಂತ ನಮ್ಮ ತಿಳಿವನ್ನು ಇನ್ನಷ್ಟು ವಿಸ್ತರಿಸಿಕೊಳ್ಳುವುದಕ್ಕೆ, ಪ್ರಸ್ತುತಗೊಳಿಸಿಕೊಳ್ಳುವುದಕ್ಕೆ ನೀರೆರೆಯುತ್ತದೆ. ನಮ್ಮ ಸಮಾಜ ನಿಜವಾಗಿಯೂ ಅನುಸರಿಸಬೇಕಾದದ್ದು ಬುದ್ಧದೇವ ಹಾಗೂ ಬಸವಾದಿ ಪ್ರಥಮರು ಹಾಕಿಕೊಟ್ಟ ಇಂತಹ ಲೋಕಹಿತದ ಪರವಾಗಿರುವ ಸಂಪ್ರದಾಯವನ್ನು.

ಆಧ್ಯಾತ್ಮಿಕ ಭ್ರಾಂತಿಯಿಂದ ಬಳಲುತ್ತಿರುವವರಿಗೆ ಮಹರ್ಷಿ ಟಾಲ್‌ಸ್ಟಾಯ್ ಹೇಳಿದ ಮಾತು ಯಾವಾಗಲೂ ನೆನಪಾಗಬೇಕು: 'ಎಲ್ಲ ಮಾನವಕೋಟಿಯೂ ಸಮಾನವಾದ ಹಾಗೂ ಅತ್ಯಂತ ಶ್ರೇಷ್ಠವಾದ, ನೆರೆಯವನನ್ನು ಪ್ರೀತಿಸುವ ಪ್ರೀತಿಯ ನಿಯಮಕ್ಕೆ ವಿಧೇಯವಾಗಿ ನಡೆದುಕೊಳ್ಳುವುದು'.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಅಸಹನೆಯಿಂದ ಭಾವೋದ್ವೇಗ, ಅದರಿಂದ ಆತಂಕ, ಆತಂಕದಿಂದ ಆಪತ್ತು ಬರುತ್ತದೆ. ಅಸಹನೆಯಿಂದ ಆಗುವ ಅನಾಹುತಗಳನ್ನು ತಪ್ಪಿಸಬೇಕಾದರೆ ಸಹನೆಯನ್ನು ರೂಢಿ ಮಾಡಿಕೊಳ್ಳಬೇಕು.
  —ಕೃಷ್ಣಮೂರ್ತಿ ಪುರಾಣಿಕ
- ತಪ್ಪುಗಳನ್ನು ಮಾಡುವ ಸ್ವಾತಂತ್ರ್ಯವನ್ನು ಒಳಗೊಂಡಿರದಿದ್ದರೆ ಸ್ವಾತಂತ್ರ್ಯವು ಯೋಗ್ಯವಾಗಿರುವುದಿಲ್ಲ.
  —ಮಹಾತ್ಮ ಗಾಂಧಿ
- ಲೋಕೋದ್ಧಾರಕ್ಕಾಗಿ ನಾವು ಕೆಲಸ ಮಾಡುತ್ತಿದ್ದೇವೆ ಎಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ಪ್ರಯತ್ನ, ನಮ್ಮ ಏಳಿಗೆಗಾಗಿ, ನಮ್ಮ ಬಾಳಿನ ಸಫಲತೆಗಾಗಿ, ನಮ್ಮ ಜೀವಸಂಸ್ಕಾರಕ್ಕಾಗಿ.
  —ಡಿ.ವಿ. ಗುಂಡಪ್ಪ
- ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳಿದುಕೊಂಡಿರುತ್ತಾನೆ.
  —ಕುವೆಂಪು
- ಶೀಲ ಮತ್ತು ಬುದ್ಧಿವಂತಿಕೆಯನ್ನು ಒಂದುಗೂಡಿಸುವುದೇ ಶಿಕ್ಷಣದ ನಿಜವಾದ ಉದ್ದೇಶ.
  —ಮಾರ್ಟಿನ್ ಲೂಥರ್‌ಕಿಂಗ್ ಜೂನಿಯರ್
- ಸೋಹಂ ಎಂದೆನಿಸದೇ ದಾಸೋಹಂ ಎಂದೆನಿಸಯ್ಯಾ.
  —ಬಸವಣ್ಣ